ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 92/2024**

ಪ್ರ.ವ.ಬೋ.ತಾಃ 07-05-2026

ಚಾಸಾಃ 17 ಫ್ರಾಸಾಃ 9

| | |
|---|---|
| ಸಾಕ್ಷಿಯ ಹೆಸರು | ಡಾ.ಹೇಮಾವತಿ |
| ತಂದೆ/ಗಂಡನ ಹೆಸರು | ಅರುಣ್ ಕುಮಾರ್.ಬಿ.ಎನ್. |
| ವಯಸ್ಸು | 37 ವರ್ಷ |
| ವೃತ್ತಿ | ಸ್ತ್ರೀರೋಗ ತಜ್ಞರು, ಸಾರ್ವಜನಿಕ ಆಸ್ಪತ್ರೆ, ಮಧುಗಿರಿ |
| ವಾಸ | ಮಧುಗಿರಿ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನಾನು ಏಪ್ರಿಲ್ 2021 ರಿಂದ ಇಲ್ಲಿಯ ತನಕ ಮಧುಗಿರಿ ಸರ್ಕಾರಿ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 28.08.2024 ರಂದು ರಾತ್ರಿ 7.25 ಗಂಟೆ ಸಮಯದಲ್ಲಿ ಆರೋಪಿ ಅಪಘಾತದ ಹಿನ್ನಲೆಯಲ್ಲಿ ನನ್ನ ಬಳಿ ಚಿಕಿತ್ಸೆಗಾಗಿ ಬಂದಿದ್ದರು. ಅವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ.

1. ಅವರ ಎಡ ಮೊಣಕಾಲಿನ ಹತ್ತಿರ ನೋವಿನಿಂದ ಕೂಡಿತ್ತು.

2. ಅವರ ಎಡ ಭುಜದ ಹತ್ತಿರ ನೋವಿನಿಂದ ಕೂಡಿತ್ತು.

ನನ್ನ ಅಭಿಪ್ರಾಯದಲ್ಲಿ ಮೇಲ್ಕಂಡ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಈಗ ಆ ಗಾಯದ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ.15 ಎಂದು, ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಯಿತು.

ಅದೇ ದಿನ ಮಧ್ಯಾಹ್ನ 3.35 ಗಂಟೆ ಸಮಯಕ್ಕೆ ಚಾ.ಸಾ.3 ರವರು ಅವರ ಹೆಂಡತಿಯ ಜೊತೆ ಅಪಘಾತದ ಹಿನ್ನೆಯಲ್ಲಿ ನನ್ನ ಬಳಿ ಚಿಕಿತ್ಸೆಗೆ ಬಂದಿದ್ದರು. ಅವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ.

1. ಅವರ ಎಡ ತಲೆಯ ಹಿಂಭಾಗದಲ್ಲಿ 1X1 cm ಅಳತೆಯ ಹರಿದ ಗಾಯವಾಗಿತ್ತು.
2. ಅವರ ಬಲ ಹಣೆಯ ಹತ್ತಿರ 2X2 cm ಅಳತೆಯ ತರಚಿದ ಗಾಯವಾಗಿತ್ತು.
3. ಅವರ ಎಡ ಗಲ್ಲದ ಮೇಲೆ 2X2 cm ಅಳತೆಯ ತರಚಿದ ಗಾಯವಾಗಿತ್ತು.
4. ಅವರ ಬಲಭುಜದ ಮೇಲ್ಭಾಗದಲ್ಲಿ 2X2 cm ಅಳತೆಯ ತರಚಿದ ಗಾಯವಾಗಿತ್ತು.
5. ಅವರ ಬಲ ಪಾದದ ಮೇಲೆ 2X2 cm ಅಳತೆಯ ತರಚಿದ ಗಾಯವಾಗಿತ್ತು.
6. ಅವರ ಬಲ ಹಣೆಯ ಎಡ ಭಾಗದಲ್ಲಿ 2X2 cm ಅಳತೆಯ ತರಚಿದ ಗಾಯವಾಗಿತ್ತು.
7. ಅವರ ಬಲ ಹಣೆಯ ಮೇಲ್ಭಾಗದಲ್ಲಿ ಊತ ಗಾಯವಾಗಿತ್ತು.

ನನ್ನ ಅಭಿಪ್ರಾಯದಲ್ಲಿ 2, 3, 6 ಮತ್ತು 7 ರಂತಹ ಗಾಯಗಳು ತೀವ್ರ ಸ್ವರೂಪದ ಗಾಯಗಳಾಗಿದ್ದು, 1, 4 ಮತ್ತು 5 ರಂತಹ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಈಗ ಆ

ಗಾಯದ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ16 ಎಂದು, ಸಾಕ್ಷಿಯ ಸಹಿಯನ್ನು ನಿಪಿ.16(ಎ) ಎಂದು ಗುರುತಿಸಲಾಯಿತು.

ಈ ಮೇಲೆ ಹೇಳಲಾದ ಗಾಯಗಳು ಒಬ್ಬ ವ್ಯಕ್ತಿಗೆ ರಸ್ತೆ ಅಪಘಾತವಾದ ಸಮಯದಲ್ಲಿ ಆಗಬಹುದಾದ ಸಾಧ್ಯತೆಯಿದೆ ಎಂದರೆ ಸರಿ.

**ಪಾಟೀ ಸವಾಲುಃ- ಆರೋಪಿ ಪರವಾಗಿ ಶ್ರೀ.ಎಂ.ಸಿ.ಕೆ. ವಕೀಲರಿಂದಃ-**

ಆ ದಿನ ಆರೋಪಿ ಮತ್ತು ಚಾಸಾ.3 ರವರಿಗೆ ಈ ಮೇಲೆ ಹೇಳಲಾದ ಗಾಯಗಳು ಆಗಿರುವುದಿಲ್ಲ, ನಾನು ಹಳೆಯ ಗಾಯಗಳ ಗುರುತಿನ ಆಧಾರದ ಮೇಲೆ ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ .